ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
Website : https://kptcl.karnataka.gov.in

ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009

ವಿಷಯ: ಕೋಲಾರ ಜಿಲ್ಲೆ, ಬಂಗಾರಪೇಟೆ ತಾಲ್ಲೂಕು, ದೊಡ್ಡಅಂಕಂಡ ಹಳ್ಳಿ ಗ್ರಾಮದ ಸರ್ವೆ ಸಂಖ್ಯೆ 31 ರಲ್ಲಿ 2-00 ಎಕರೆ ಸರ್ಕಾರಿ ಜಮೀನು ಕವಿಪ್ರನಿನಿಗೆ ಮಂಜೂರಾಗಿದ್ದು, ಸರ್ವೆ ಸಂಖ್ಯೆ 33 ರಲ್ಲಿ 6 ಗುಂಟೆ ಜಮೀನು ನಿಗಮದಿಂದ ಒತ್ತುವರಿಯಾಗಿರುವ ಕಾರಣ, ಸದರಿ ಜಾಗವನ್ನು ಬಂಗಾರಪೇಟೆ ತಾಲ್ಲೂಕು ನ್ಯಾಯಾಲಯಕ್ಕೆ ಹಿಂದಿರುಗಿಸುವ ಬಗ್ಗೆ.

ಓದಿದೆ:
1. ವಿಶೇಷ ಜಿಲ್ಲಾಧಿಕಾರಿಗಳು, ಕೋಲಾರ ಜಿಲ್ಲೆ ರವರ ಅಧಿಕೃತ ಜ್ಞಾಪನ ಸಂಖ್ಯೆ: ಎಲ್‌ಎನ್‌ಡಿ/ಸಿಆರ್/87/86-87 ದಿನಾಂಕ 05/09/1986.
2. ತಹಶೀಲ್ದಾರ್, ಬಂಗಾರಪೇಟೆ ತಾಲ್ಲೂಕು ರವರ ಪತ್ರ ಸಂಖ್ಯೆ: ಎನ್‌ಸಿಆರ್/ಸಿಆರ್/180-202/2021 ದಿನಾಂಕ 23/09/2021.
3. ಮು.ಇಂ(ವಿ)/ಪ್ರ.ವ/ಕಾ.ನಿ.ಇಂ(ಸಿ)-1/ಸ.ಕಾ.ನಿ.ಇಂ-1/2021-22/17378-80 ದಿನಾಂಕ 17/01/2022.
4. ದಿನಾಂಕ 18/04/2022 ರಂದು ನಡೆದ 130 ನೇ ಕವಿಪ್ರನಿನಿ ಮಂಡಳಿ ನಿರ್ದೇಶಕರುಗಳ ಸಭೆಯ ನಡವಳಿಗಳು.

**ಪೀಠಿಕೆ:**

1. ಕೋಲಾರ ಜಿಲ್ಲೆ, ಬಂಗಾರಪೇಟೆ ತಾಲ್ಲೂಕು, ದೊಡ್ಡಅಂಕಂಡ ಹಳ್ಳಿ ಗ್ರಾಮದ ಸರ್ವೆ ಸಂಖ್ಯೆ 31 ರಲ್ಲಿ 2-00 ಎಕರೆ ಸರ್ಕಾರಿ ಜಮೀನನ್ನು ಅಂದಿನ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ 66/11ಕೆ.ವಿ ಉಪಕೇಂದ್ರ ಹಾಗೂ ವಸತಿ ಗೃಹಗಳನ್ನು ನಿರ್ಮಿಸಲು ವಿಶೇಷ ಜಿಲ್ಲಾಧಿಕಾರಿಗಳು, ಕೋಲಾರ ಜಿಲ್ಲೆ ರವರು ದಿನಾಂಕ 05/09/1986 ರ ಅಧಿಕೃತ ಜ್ಞಾಪನದಲ್ಲಿ ಹಂಚಿಕೆ ಮಾಡಿರುತ್ತಾರೆ.

2. ಸದರಿ ಜಮೀನಿನಲ್ಲಿ 1991 ನೇ ಸಾಲಿನಲ್ಲಿ 66/11ಕೆ.ವಿ ಉಪಕೇಂದ್ರವನ್ನು ಹಾಗೂ ಅಧಿಕಾರಿ/ ನೌಕರರ ವಸತಿ ಗೃಹಗಳನ್ನು ನಿರ್ಮಿಸಿದ್ದು, ಸದರಿ ಜಾಗಕ್ಕೆ ನಿಗಮದ ವತಿಯಿಂದ ಸುತ್ತುಗೋಡೆ ನಿರ್ಮಿಸಲಾಗಿರುತ್ತದೆ ಹಾಗೂ ಸದರಿ ಜಾಗದ ಮಧ್ಯದಲ್ಲಿ ಬಂಗಾರಪೇಟೆ-ಸೂಲಿಕುಂಟೆ ರಸ್ತೆ ಹಾದುಹೋಗಿದ್ದು, ರಸ್ತೆಯ ಒಂದು ಭಾಗದಲ್ಲಿ ಉಪಕೇಂದ್ರವನ್ನು ಹಾಗೂ ಮತ್ತೊಂದು ಭಾಗದಲ್ಲಿ ವಸತಿ ಗೃಹಗಳನ್ನು ನಿರ್ಮಿಸಲಾಗಿದೆ. ಸದರಿ ಜಾಗ 1991 ನೇ ಸಾಲಿನಿಂದ ಯಾವುದೇ ತಕರಾರು ಇಲ್ಲದೆ ಕವಿಪ್ರನಿನಿಯ ಅನುಭವದಲ್ಲಿರುತ್ತದೆ.

3. ಕವಿಪ್ರನಿನಿಯ ವಸತಿ ಗೃಹದ ಜಾಗದ ಪಕ್ಕದ ಸರ್ವೆ ಸಂಖ್ಯೆ 33 ರ ಜಮೀನು ಬಂಗಾರಪೇಟೆ ತಾಲ್ಲೂಕು ನ್ಯಾಯಾಲಯಕ್ಕೆ ಹಂಚಿಕೆಯಾಗಿದ್ದು, ಸದರಿ ಜಾಗದಲ್ಲಿ ನ್ಯಾಯಾಲಯ ಕಟ್ಟಡ ನಿರ್ಮಿಸುತ್ತಿದ್ದು, ಸುತ್ತುಗೋಡೆ ನಿರ್ಮಿಸುವ ಸಂಬಂಧ ಜಂಟಿ ಸರ್ವೆ ಕಾರ್ಯದಲ್ಲಿ 6 ಗುಂಟೆ ಜಮೀನು ಕವಿಪ್ರನಿನಿಯಿಂದ ಒತ್ತುವರಿಯಾಗಿದೆಯೆಂದು ಹಾಗೂ ತೆರವುಗೊಳಿಸಲು ತಹಶೀಲ್ದಾರ್, ಬಂಗಾರಪೇಟೆ ತಾಲ್ಲೂಕು ರವರು ಕೋರಿರುತ್ತಾರೆ.

4. ಜಂಟಿ ಸರ್ವೆಯನ್ವಯ ಸರ್ವೆ ಸಂಖ್ಯೆ 33 ರ 6 ಗುಂಟೆ ಜಮೀನನ್ನು ಕವಿಪ್ರನಿನಿಗೆ ಹಂಚಿಕೆಯಾದ ಸರ್ವೆ ಸಂಖ್ಯೆ 31 ರಲ್ಲಿ ಗುರುತಿಸಿಕೊಳ್ಳಲಾಗಿದೆ. ಕವಿಪ್ರನಿನಿಯ ಅನುಭವದಲ್ಲಿರುವ ಜಮೀನಿನ ಮಧ್ಯದಲ್ಲಿ ಬಂಗಾರಪೇಟೆ-ಸೂಲಿಕುಂಟೆ ಜಿಲ್ಲಾ ಮುಖ್ಯ ರಸ್ತೆ ಹಾದುಹೋಗಿದ್ದು, ಗ್ರಾಮ ನಕಾಶೆಯಲ್ಲಿ ಬಂಡಿದಾರಿಯೆಂದು ಗುರುತಿಸಲಾಗಿದ್ದು, ನಿಗಮದಿಂದ ಸರ್ವೆ ಸಂಖ್ಯೆ 33 ರಲ್ಲಿ ಒತ್ತುವರಿಯಾಗಿರುವ 6 ಗುಂಟೆ ಜಾಗ ಮುಖ್ಯ ರಸ್ತೆಯಲ್ಲಿ ಸೇರಿಕೊಂಡಿದೆಯೆಂದು ತಹಶೀಲ್ದಾರ್, ಬಂಗಾರಪೇಟೆ ತಾಲ್ಲೂಕು ರವರು ತಿಳಿಸಿರುತ್ತಾರೆ.

5. ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಬೆಂಗಳೂರು ರವರು ಜಂಟಿ ಸರ್ವೇಯನ್ವಯ ಹಾಗೂ ತಹಶೀಲ್ದಾರ್, ಬಂಗಾರಪೇಟೆ ತಾಲ್ಲೂಕು ರವರ ಕೋರಿಕೆಯ ಮೇರೆಗೆ ನಿಗಮದಿಂದ ಒತ್ತುವರಿಯಾಗಿರುವ 6 ಗುಂಟೆ ಜಮೀನನ್ನು ಹಿಂದಿರುಗಿಸಲು ಅನುಮೋದನೆ ಕೋರಿರುತ್ತಾರೆ.

6. ನಿಗಮದ ವಸತಿ ಗೃಹಗಳ ಹಿಂಭಾಗದಲ್ಲಿರುವ 6 ಗುಂಟೆ ಜಾಗ ಬೇರೆ ಸರ್ವೆ ಸಂಖ್ಯೆಗೆ ಸೇರಿದ್ದು, ಸದರಿ ಜಾಗ ತಾಲ್ಲೂಕು ನ್ಯಾಯಾಲಯಕ್ಕೆ ಹಂಚಿಕೆಯಾಗಿರುವ ಕಾರಣ, ಹಾಗೂ ನಿಗಮಕ್ಕೆ ಹಂಚಿಕೆಯಾದ ಜಾಗದ ಮಧ್ಯದಲ್ಲಿ ಗ್ರಾಮ ನಕಾಶೆಯಲ್ಲಿನ ಬಂಡಿದಾರಿಗೆ ಬದಲಾಗಿ ಜಿಲ್ಲಾ ಮುಖ್ಯ ರಸ್ತೆ ಹಾದುಹೋಗಿರುವ ಕಾರಣ, ನಿಗಮದಿಂದ ಒತ್ತುವರಿಯಾಗಿರುವ 6 ಗುಂಟೆ ಜಮೀನನ್ನು ತಾಲ್ಲೂಕು ನ್ಯಾಯಾಲಯಕ್ಕೆ ಹಿಂದಿರುಗಿಸುವುದು ಅನಿವಾರ್ಯವಾಗಿರುತ್ತದೆ.

7. ಸದರಿ ಪ್ರಸ್ತಾವನೆಯನ್ನು ದಿನಾಂಕ 18/04/2022 ರಂದು ನಡೆದ 130 ನೇ ಮಂಡಳಿ ನಿರ್ದೇಶಕರುಗಳ ಸಭೆಯಲ್ಲಿ ಮಂಡಿಸಲಾಗಿದ್ದು, ಮಂಡಳಿ ಸಭೆ ನಿಗಮದ ವತಿಯಿಂದ ಸರ್ವೆ ಸಂಖ್ಯೆ 33 ರಲ್ಲಿ ಒತ್ತುರಿಯಾಗಿರುವ ನಿಗಮದ ವಸತಿ ಗೃಹಗಳ ಹಿಂಭಾಗದ 6 ಗುಂಟೆ ಜಮೀನನ್ನು ತಹಶೀಲ್ದಾರ್, ಬಂಗಾರಪೇಟೆ ರವರ ಕೋರಿಕೆಯ ಮೇರೆಗೆ ಬಂಗಾರಪೇಟೆ ತಾಲ್ಲೂಕು ನ್ಯಾಯಾಲಯಕ್ಕೆ ಬಿಟ್ಟುಕೊಡುವ ಪ್ರಸ್ತಾವನೆಯನ್ನು ಪರಿಶೀಲಿಸಿದ್ದು, ಒತ್ತುವರಿಯಾದ 6 ಗುಂಟೆ ಜಾಗವನ್ನು ಬಿಟ್ಟುಕೊಡಲು ಅನುಮೋದನೆ ನೀಡಿದೆ.

8. ಕವಿಪ್ರನಿನಿ ಮಂಡಳಿ ಸಭೆಯಲ್ಲಿ ಸದರಿ ಪ್ರಸ್ತಾವನೆಯ ಮೇಲೆ ಈ ಕೆಳಕಂಡಂತೆ ನಿರ್ಣಯ ತೆಗೆದುಕೊಳ್ಳಲಾಗಿದೆ.

> *"RESOLVED THAT for the reasons explained above, approval be and is hereby accorded to handover the identified excess portion of 06 guntas of land to Bangarpet Taluk Court in survey No.33, Doddankandahalli Village, Baangarapete Taluk, Kolar District which is adjacent to Staff Quarters, as per the request of Tahasildar, Bangarapete Taluk vide letter dated 23/09/2021 and joint survey Report.*
>
> *FURTHER RESOLVED THAT Director (Admin. &HR), KPTCL be and is hereby authorized to issued necessary orders accordingly".*

9. ಈ ಹಿನ್ನೆಲೆಯಲ್ಲಿ, ಕೆಳಕಂಡಂತೆ ಆದೇಶಿಸಲಾಗಿದೆ.

**ಕವಿಪ್ರನಿನಿ/ಆದೇಶ ಸಂಖ್ಯೆ: ಬಿ7/21348/21-22/ಬೆಂಗಳೂರು** **ದಿನಾಂಕ 15/06/2022**

ದಿನಾಂಕ 18/04/2022 ರ 130 ನೇ ಕವಿಪ್ರನಿನಿ ಮಂಡಳಿ ಸಭೆಯ ನಡವಳಿಯನ್ವಯ ಕೋಲಾರ ಜಿಲ್ಲೆ, ಬಂಗಾರಪೇಟೆ ತಾಲ್ಲೂಕು, ದೊಡ್ಡಅಂಕಂಡ ಹಳ್ಳಿ ಗ್ರಾಮದ ಸರ್ವೆ ಸಂಖ್ಯೆ 31 ರಲ್ಲಿ ಮಂಜೂರಾದ 2-00 ಎಕರೆ ಸರ್ಕಾರಿ ಜಮೀನಿನ ಮಧ್ಯದಲ್ಲಿ ಹಾದುಹೋಗುವ ರಸ್ತೆ, ಗ್ರಾಮ ನಕಾಶೆಯಲ್ಲಿ ಬಂಡಿ ದಾರಿಯೆಂದು ಗುರುತಿಸಿದ್ದರೂ ಬಂಗಾರಪೇಟೆ-ಸೂಲಿಕುಂಟೆ ಜಿಲ್ಲಾ ಮುಖ್ಯ ರಸ್ತೆಯಾಗಿದ್ದ ಕಾರಣ, ನಿಗಮದ 6 ಗುಂಟೆ ಜಮೀನು ರಸ್ತೆ ನಿರ್ಮಾಣದಲ್ಲಿ ಸೇರಿದ್ದು, ಜಂಟಿ ಸರ್ವೆ ವರದಿಯಲ್ಲಿ ದೃಢಪಟ್ಟಿರುವ ಕಾರಣ, ನಿಗಮದಿಂದ ವಸತಿ ಗೃಹಗಳ ಹಿಂಭಾಗದ ಸರ್ವೆ ಸಂಖ್ಯೆ 33 ರಲ್ಲಿ ಹೆಚ್ಚುವರಿಯಾಗಿ ಒತ್ತುವರಿಯಾಗಿದ್ದ 6 ಗುಂಟೆ ಜಾಗವನ್ನು ಬಂಗಾರಪೇಟೆ ತಾಲ್ಲೂಕು ನ್ಯಾಯಾಲಯಕ್ಕೆ ಬಿಟ್ಟುಕೊಡಲು ಆದೇಶಿಸಲಾಗಿದೆ.

ಸದರಿ ಒತ್ತುವರಿಯಾದ ಜಾಗದಲ್ಲಿ ಹಾಲಿ ಇರುವ ಕಲ್ಲುಚಪ್ಪಡಿಗಳನ್ನು ಬಳಸಿ ನಿರ್ಮಿಸಿದ್ದ ತಾತ್ಕಾಲಿಕ ಸುತ್ತುಗೋಡೆಯನ್ನು ತೆರವುಗೊಳಿಸಿ, ಶಾಶ್ವತ ಸುತ್ತುಗೋಡೆಯನ್ನು (ಕಾಂಪೌಂಡ್) ಲೋಕೋಪಯೋಗಿ ಇಲಾಖೆ ವತಿಯಿಂದ ನಿರ್ಮಿಸಿಕೊಳ್ಳುವಂತೆ ಸಹ ಆದೇಶಿಸಲಾಗಿದೆ.

ಕವಿಪ್ರನಿನಿಯಿಂದ ಒತ್ತುವರಿಯಾದ 6 ಗುಂಟೆ ಜಾಗವನ್ನು ಬಂಗಾರಪೇಟೆ ತಾಲ್ಲೂಕು ನ್ಯಾಯಾಲಯಕ್ಕೆ ಬಿಟ್ಟುಕೊಟ್ಟ ಹಿನ್ನೆಲೆಯಲ್ಲಿ, ನಿಗಮದಲ್ಲಿ ಹಾಲಿ ಸ್ವಾಧೀನದಲ್ಲಿ ಉಳಿಯುವ 1 ಎಕರೆ 34 ಗುಂಟೆ ಜಮೀನಿನ ವಿವರಗಳನ್ನು ಸಂಬಂಧಪಟ್ಟ ಟಿಎಲ್ ಮತ್ತು ಎಸ್ಎಸ್ ವಿಭಾಗದ ಆಸ್ತಿ ಪುಸ್ತಕದಲ್ಲಿ ಅಗತ್ಯ ದಾಖಲಾತಿಗಳನ್ನು ಮಾಡುವುದು.

ಆದೇಶದ ಮೇರೆಗೆ

ನಿರ್ದೇಶಕರು (ಆ ಮತ್ತು ಮಾ.ಸಂ)
ಕವಿಪ್ರನಿನಿ, ಬೆಂಗಳೂರು.

**ಪ್ರತಿಗಳು:-**

1. ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಕವಿಪ್ರನಿನಿ, ಬೆಂಗಳೂರು.
2. ಮುಖ್ಯ ಇಂಜಿನಿಯರ್ (ವಿ), (ಯೋ ಮತ್ತು ಸ)/(ಟಿಎ ಮತ್ತು ಕ್ಯೂಸಿ), ಕವಿಪ್ರನಿನಿ, ಬೆಂಗಳೂರು.
3. ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ) /(ಆಂತರಿಕ ಪರಿಶೋಧನೆ), ಕವಿಪ್ರನಿನಿ.
4. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
5. ಅಧೀಕ್ಷಕ ಇಂಜಿನಿಯರ್ (ವಿ), ಪ್ರಸರಣ (ನಿ) ವೃತ್ತ, ಬಿಆರ್ಎಜಡ್ ಕವಿಪ್ರನಿನಿ, ಬೆಂಗಳೂರು.
6. ಅಧೀಕ್ಷಕ ಇಂಜಿನಿಯರ್ (ಸಿವಿಲ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
7. ಅಧೀಕ್ಷಕ ಇಂಜಿನಿಯರ್ (ವಿ), (ಐಟಿ ಮತ್ತು ಎಂಐಎಸ್) – ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು
8. ಲೆಕ್ಕ ನಿಯಂತ್ರಣಾಧಿಕಾರಿ, ಪ್ರಸರಣ ವಲಯ, ಕವಿಪ್ರನಿನಿ, ಬೆಂಗಳೂರು.
9. ಲೆಕ್ಕ ನಿಯಂತ್ರಣಾಧಿಕಾರಿ (ಲೆಕ್ಕಗಳು), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
10. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಟಿಎಲ್ ಮತ್ತು ಎಸ್ಎಸ್ ವಿಭಾಗ, ಕವಿಪ್ರನಿನಿ, ಕೋಲಾರ.
11. ಕಾರ್ಯನಿರ್ವಾಹಕ ಇಂಜಿನಿಯರ್ (ಸಿವಿಲ್), ಪ್ರಸರಣ ವಲಯ, ಕವಿಪ್ರನಿನಿ, ಬೆಂಗಳೂರು.
12. ಉಪಲೆಕ್ಕ ನಿಯಂತ್ರಣಾಧಿಕಾರಿ (ಆಂತರಿಕ ಪರಿಶೋಧನೆ), ಪ್ರಸರಣ ವಲಯ, ಕವಿಪ್ರನಿನಿ, ಬೆಂಗಳೂರು.
13. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಪ್ರಸರಣ)/ ನಿರ್ದೇಶಕರು (ಹಣಕಾಸು)/ ನಿರ್ದೇಶಕರು (ಆ ಮತ್ತು ಮಾ. ಸಂ) ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
14. ಲೆಕ್ಕಾಧಿಕಾರಿ (ಕೋಡಿಫಿಕೇಷನ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.